# ಮನೆಯಂಗಳದ ಮದ್ದು ಕಿಸ್ಕಾರ

■ ಚಿತ್ರ ಬರಹ:
ಪ.ರಾಮಕೃಷ್ಣ ಶಾಸ್ತ್ರಿ





ಅರಣ್ಯದಲ್ಲಿ ತಾನಾಗಿಯೇ ಬೆಳೆಯುವ ಗಿಡಮೂಲಿಕೆಗಳನ್ನು ಬೇರುಸಹಿತ ನಾಶ ಮಾಡಿ ಅನ್ಯ ಕೃಷಿ ಮಾಡುತ್ತಿರುವ ನಾವು ಅಳಿವಿನಂಚಿಗೆ ತಳ್ಳುತ್ತಿರುವ ವನಸ್ಪತಿಗಳಲ್ಲಿ ಕಿಸ್ಕಾರವೂ ಒಂದು. ಕೇಪಳ, ಹೊಳೆದಾಸಾಳ ಮುಂತಾದ ಹೆಸರುಗಳಿವೆ ಇದಕ್ಕೆ. ಕೆಂಪು, ಬಿಳಿ, ಹಳದಿ ವರ್ಣದ ಹೂ ಬಿಡುವ ಜಾತಿಗಳಿದ್ದು ಔಷಧೀಯ ದೃಷ್ಟಿಯಿಂದ ಕೆಂಪು ಹೂವಿನ ಗಿಡದ ಬೇರು, ಚಿಗುರು, ಹೂ, ಕಾಯಿ ಎಲ್ಲವೂ ನಾನಾ ಕಾಯಿಲೆಗಳಿಗೆ ಮದ್ದೆಂದು ವೈದ್ಯಗ್ರಂಥಗಳು ಬಣ್ಣಿಸಿವೆ. ಈಗ ಕಸಿ ತಜ್ಞರು ಗೊಂಚಲಾಗಿ ಹೂ ಬಿಡುವ ಅದರ ವಿವಿಧ ಪ್ರಭೇದಗಳನ್ನು ಸೃಷ್ಟಿಸಿದ್ದರೂ ಕಾಡು ಗಿಡದ ಹಾಗೆ ಇವು ಮದ್ದಾಗುವ ಬಗೆಗೆ ವಿವರಗಳಿಲ್ಲ.

ಸಸ್ಯಶಾಸ್ತ್ರದಲ್ಲಿ ಇಕ್ಸೋರ ಕೊಸೊನಿಯ ಜಾತಿಗೆ ಸೇರಿದ ಕಿಸ್ಕಾರದ ಹೂವು, ಗಿಡಗಳಲ್ಲಿ ಲೂಪೋಲ್, ಯುರಾಸೋಲಿಕ್ ಆಸಿಡ್, ಒಲಿಯನೋಲಿಕ್ ಆಸಿಡ್, ಸೀಟೊಸ್ಟೆರಾಲ್, ಅಂಥೋಸಿಯಾನ್ಸಿಸ್, ಪ್ರೊಂಥಾಸಿಯಾಂಡಿನಸ್ ಮುಂತಾದ ಹಲವು ರಾಸಾಯನಿಕಗಳು ಇರುವುದು ಅದನ್ನು ಅಮೂಲ್ಯ ಔಷಧಿಗಳ ಸಾಲಿಗೆ ಸೇರಿಸಿದೆ. ಕಿಸ್ಕಾರದ ಮಧ್ಯದ ದೇಟು ತೆಗೆದು ಅದರ ಕಾಯಿಯೊಂದಿಗೆ ಹೂವನ್ನು ಜಜ್ಜಿ ರಸ ತೆಗೆದು ಸೋಸಿ ಕಣ್ಣಿಗೆ ಹಾಕಿದರೆ ಮಕ್ಕಳ ಕೆಂಗಣ್ಣು ಗುಣವಾಗುತ್ತದೆ. ರಕ್ತವಾಂತಿ, ವಿಷಕಡಿತಗಳಿಗೆ ಕಿಸ್ಕಾರದ ಬೇರಿನಿಂದ ಮಾಡುವ ಚಿಕಿತ್ಸೆಗಳಿವೆ. ನಿತ್ರಾಣದಿಂದ ಕಿವಿ ಕೇಳದಂತಾಗಿದ್ದರೆ ಎಳನೀರಿನಲ್ಲಿ ಕಿಸ್ಕಾರ ಹೂಗಳನ್ನು ಕಿವುಚಿ ಹಾಲು, ತುಪ್ಪ, ಸಕ್ಕರೆ ಸೇರಿಸಿ ಕುದಿಸಿ ಕೆಲವು ದಿನ ಸೇವಿಸಿದರೆ ಶಮನವಾಗುತ್ತದೆ ಎನ್ನುತ್ತಾರೆ ಹಿರಿಯರು.

ಹೂಗಳನ್ನು ಹಾಗೆಯೇ ಜಗಿದು ತಿಂದರೆ ಬಾಯಿಹುಣ್ಣು ಗುಣವಾಗುತ್ತದೆ. ತೆಂಗಿನಕಾಯಿ, ಮಜ್ಜಿಗೆ, ಜೀರಿಗೆ ಇತ್ಯಾದಿ ಸೇರಿಸಿ ತಂಬಳಿ ಮಾಡಿದರೆ ಊಟಕ್ಕೆ ರುಚಿಕರ, ದೇಹಕ್ಕೆ ಆರೋಗ್ಯಕರ. ಕಿಸ್ಕಾರದ ಬೇರಿನ ಕಷಾಯದಿಂದ ಬಾಯಿ ಮುಕ್ಕಳಿಸಿದರೆ ಬಾಯಿಹುಣ್ಣು ಗುಣವಾಗುತ್ತದೆ. ಬೇರಿನ ತೊಗಟೆಯನ್ನು ಮಜ್ಜಿಗೆಯಲ್ಲಿ ಅರೆದು ಕಾಯಿಸಿ ಸಕ್ಕರೆ ಬೆರೆಸಿ ಸೇವಿಸಿದರೆ ಮಕ್ಕಳ ಗ್ರಹಣಿ ರೋಗಕ್ಕೆ ಒಳ್ಳೆಯ ಮದ್ದು. ಹೂವನ್ನು ಹಾಲಲ್ಲಿ ಬೇಯಿಸಿ ಹಾಲನ್ನು ಕುಡಿಯಲು ಕೊಟ್ಟು ಹೂವನ್ನು ಅರೆದು ತಲೆಗೆ ಹಾಕುವುದು ತಾಮರೆ ರೋಗವನ್ನು ಗುಣಪಡಿಸುತ್ತದೆ. ಇತರ ಗಿಡಮೂಲಿಕೆಗಳೊಂದಿಗೆ ಮಜ್ಜಿಗೆ ಮತ್ತು ಕಿಸ್ಕಾರದ ಹೂವನ್ನು ಸೇರಿಸಿ ತಯಾರಿಸುವ ಔಷಧಿಯಿಂದ ಸರ್ಪಸುತ್ತಿನ ಪ್ರಕಾರದ ಅನೇಕ ಕಾಯಿಲೆಗಳನ್ನು ಶಮನ ಪಡಿಸಲಾಗುತ್ತದೆ. ರಕ್ತದೋಷದ ನಿವಾರಣೆಯಲ್ಲಿ ಕಿಸ್ಕಾರ ಹೂ, ಜೀರಿಗೆ ಹಾಗೂ ತೆಂಗಿನಕಾಯಿ ಹಾಲನ್ನು ಉಪಯೋಗ ಮಾಡುತ್ತಾರೆ.

ಮೂತ್ರಸಂಬಂಧಿ ರೋಗಗಳಿಗೆ ಕಿಸ್ಕಾರದಿಂದ ಮಾಡುವ ಚಿಕಿತ್ಸೆಗಳನ್ನು ಆಯುರ್ವೇದ ವಿವರಿಸಿದೆ. ಎಳನೀರಿನಲ್ಲಿ ಹೂವನ್ನು ಅರೆದು ಹಾಲು, ತುಪ್ಪ, ಸಕ್ಕರೆ ಬೆರೆಸಿ ಕುಡಿದರೆ ಮೂತ್ರದ ಧಾತುಸ್ರಾವ ನಿಲ್ಲುತ್ತದೆ. ಮಜ್ಜಿಗೆಯಲ್ಲಿ ಹೂಗಳನ್ನು ಅರೆದು ಕುದಿಸಿ ರಸ ಸೇವಿಸುವುದು ಶರ್ಕರಾ ಮೂತ್ರವನ್ನು ಗುಣಪಡಿಸುವುದು. ಉರಿ, ದಾಹ, ಬೆವರು, ಕಿವಿಯಲ್ಲಿ ಸದ್ದು ಬರುವುದು ಮುಂತಾದ ತೊಂದರೆಗಳಿಗೆ ಈ ಹೂವಿನಿಂದ ತಯಾರಿಸುವ ಮದ್ದುಗಳಿವೆ. ಇದರ ಬೇರಿನ ಹಾಲು ಕಷಾಯ ಮೂತ್ರಕೋಶದ ಕಲ್ಲುಗಳನ್ನು ಕರಗಿಸುತ್ತದೆ ಎನ್ನುತ್ತಾರೆ ಪಾಣಾಜೆ ಪಂಡಿತರು.

ಕೈ ಕಾಲುಗಳ ಬೆರಳುಗಳ ಎಡೆಯಲ್ಲಿ ಹುಣ್ಣಾಗಿದ್ದರೆ ಕಿಸ್ಕಾರದ ಬೇರನ್ನು ತೆಂಗಿನಕಾಯಿ ಹಾಲಿನಲ್ಲಿ ತೇದು ಲೇಪಿಸುತ್ತಾರೆ. ಇದು ಹರಡುವ ವ್ರಣಗಳು, ಕಜ್ಜಿ, ಮಕ್ಕಳ ಕೆಂಪುಗಳನ್ನೂ ಗುಣ ಪಡಿಸಬಲ್ಲುದು. ಬೇರಿನ ತೊಗಟೆಯನ್ನು ತೆಂಗಿನೆಣ್ಣೆಯಲ್ಲಿ ಕುದಿಸಿ ತಯಾರಿಸಿದ ತೈಲ ಕೂಡಾ ಈ ಪ್ರಕಾರದ ಸಮಸ್ಯೆಗಳನ್ನು ಶಮನಗೊಳಿಸಬಲ್ಲುದು. ಬಿಳಿ ಕಿಸ್ಕಾರದ ಬೇರನ್ನು ಹಾಲಿನಲ್ಲಿ ಅರೆದು ಸೇವಿಸಿದರೆ ಕೆಂಬಾವು ತಗ್ಗುತ್ತದೆ. ಮಲಬದ್ಧತೆ ನಿವಾರಣೆಯಲ್ಲಿ ಕಿಸ್ಕಾರದ ಚಿಗುರಿನಿಂದ ಮಾಡುವ ಔಷಧವಿದೆ. ಅನೇಕ ವ್ಯಾಧಿಗಳನ್ನು ನಿವಾರಿಸುವ ನಿಸರ್ಗದ ಈ ಕೊಡುಗೆ ಅಳಿಯದೆ ಉಳಿಯಬೇಕು. ●